


**SARAYU** - Kannada Monthly Regn. No. KARKAN/2014/62363
**Vol. : 9 Issue : 2 Month - July** 5124/ ಶುಭಕೃತ್ ಸಂವತ್ಸರ ಜುಲೈ 2022 ಪುಟ 8 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

# ಶ್ರೀರಾಮ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಮತ್ತು ಪದವಿ ಪೂರ್ವ ವಿದ್ಯಾಲಯಗಳ

# ಆಗತ ಸ್ವಾಗತ ಕಾರ್ಯಕ್ರಮ






















ಹಿರಿಯರ ಆಗಮನ
ದೀಪಪ್ರಜ್ವಲನ
ಅಗ್ನಿಹೋತ್ರ
ಸರಸ್ವತಿ ವಂದನಾ
ವಿದ್ಯಾರ್ಥಿಗಳ ಸ್ವಾಗತ
ಅಗ್ನಿಪ್ರತಿಷ್ಠೆ
ಘೃತಾಹುತಿ
ತಿಲಕಧಾರಣೆ
ಪುಷ್ಪಾರ್ಚನೆ
ವೇದಘೋಷ
ಮಂಗಳವಾದ್ಯ
ಪ್ರಸ್ತಾವನೆ
ಮಾರ್ಗದರ್ಶನ
ಗಣ್ಯರ ಮಾತು
ಶಾಂತಿಮಂತ್ರ

ಶ್ರೀರಾಮ ವಿದ್ಯಾಕೇಂದ್ರದ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ವಿಭಾಗಗಳಿಗೆ ಈ ಶೈಕ್ಷಣಿಕ ವರ್ಷ(2022–23)ದಲ್ಲಿ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳನ್ನು ಸ್ವಾಗತಿಸುವ ವೈಶಿಷ್ಟ್ಯಪೂರ್ಣ ಕಾರ್ಯಕ್ರಮ ಆಗತ–ಸ್ವಾಗತ. ಅಂದು ವಿದ್ಯಾರ್ಥಿಗಳು ಹೋಮಕುಂಡದ ಅಗ್ನಿಗೆ ಆಜ್ಯಾಹುತಿ ನೀಡಿ, ಭಾರತಮಾತೆಗೆ ಪುಷ್ಪಾರ್ಚನೆಗೈದು, ಹಿರಿಯರಿಂದ ಆಶೀರ್ವಾದ ಪಡೆದು ಸಂಕಲ್ಪದ ತಿಲಕಧರಿಸಿಕೊಂಡು ತಮ್ಮ ಶಾಲಾರಂಭವನ್ನು ಅರ್ಥವತ್ತಾಗಿಸಿಕೊಳ್ಳುತ್ತಾರೆ. ವಿದ್ಯಾರ್ಥಿಗಳನ್ನು ಕಲಶ, ಕನ್ನಡಿ ಮುಂತಾದ ಮಂಗಳ ವಸ್ತುಗಳೊಂದಿಗೆ ಬರಮಾಡಿಕೊಂಡು ಆರತಿ ಬೆಳಗಿ ಹರಸಲಾಗುತ್ತದೆ.




**ವಿಶ್ವ ಯೋಗ ದಿನ 21.06.2022:**

ಶ್ರೀರಾಮ ಶಿಶುಮಂದಿರ ಹನುಮಾನ್ ನಗರ ಕಲ್ಲಡ್ಕ, ಶ್ರೀಕೃಷ್ಣ ಶಿಶು ಮಂದಿರ ಸಜೀಪ ಕಂದೂರು, ಶ್ರೀ ಗಣೇಶ ಶಿಶು ಮಂದಿರ ಬೊಂಡಾಲ, ಅಕ್ಕ ಮಹಾದೇವಿ ಶಿಶು ಮಂದಿರ ಅಜ್ಜಿಬೆಟ್ಟು ಬಿ. ಸಿ ರೋಡ್, ಸರಸ್ವತಿ ಶಿಶು ಮಂದಿರ ಕೊಪ್ಪಲಕೋಡಿಯಲ್ಲಿ ಮಕ್ಕಳಿಂದ ಸುಲಭ ಆಸನಗಳನ್ನು ಮಾಡಿಸುವುದರ ಮೂಲಕ ವಿಶ್ವ ಯೋಗ ದಿನವನ್ನು ಆಚರಿಸಲಾಯಿತು. ಎಲ್ಲಾ ವಿಭಾಗಗಳಲ್ಲಿ ಬಹಳ ಉತ್ಸಾಹದಿಂದ ಪುಟಾಣಿಗಳು ಭಾಗವಹಿಸಿದ್ದು, ನಂತರದ ದಿನಗಳಲ್ಲಿ ತಮ್ಮ ಮನೆಲಗಳಲ್ಲೂ ಇದನ್ನು ಮುಂದುವರೆಸಿದ ಉದಾಹರಣೆಗಳಿವೆ.



**ಶಿಶುಮಂದಿರದ ನೂತನ ಮುಖ್ಯಸ್ಥೆ 27.6.22:**

ಕಳೆದ 10 ವರ್ಷಗಳಿಂದ ಶಿಶುಮಂದಿರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಶೋಭ ಮಾತಾಜಿ ಇವರನ್ನು ಶಿಶುಮಂದಿರ ವಿಭಾಗಗಳ ನೂತನ ಮುಖ್ಯಸ್ಥೆಯನ್ನಾಗಿ ನೇಮಿಸಲಾಯಿತು. ಈ ಸಂದರ್ಭದಲ್ಲಿ ವಿದ್ಯಾಕೇಂದ್ರದ ಹಿರಿಯರು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ



**ಸಂಗೀತ ತರಬೇತಿ ಉದ್ಘಾಟನೆ : 2.6.2022**

ನರಿಕೊಂಬು ಕೀರ್ತನ ಸಂಗೀತ ಶಾಲೆಯ ಶಿಕ್ಷಕರು ಶ್ರೀಮತಿ ರಜತರವರು ಸಂಗೀತ ತರಬೇತುದಾರರಾಗಿ ತರಗತಿಗಳನ್ನು ಆರಂಭಿಸಿದರು.



**ಭರತನಾಟ್ಯ ತರಬೇತಿ ಉದ್ಘಾಟನೆ : 4.6.22**

ಭರತನಾಟ್ಯ ತರಬೇತುದಾರರಾಗಿ ವಿದುಷಿ ದಾಕ್ಷಾಯಿಣಿ ಮಂಗಳೂರು ಇವರು ನಡೆಸಿಕೊಟ್ಟರು.



**ಚಿತ್ರಕಲೆ ಸ್ಪರ್ಧೆ 4.6.2022 :** ವಿಜಯವಾಣಿ ಪತ್ರಿಕೆಯ ವತಿಯಿಂದ 5–7ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಯುಕ್ತ ಪರಿಸರ ಸಂರಕ್ಷಣೆ ಎಂಬ ವಿಷಯದಲ್ಲಿ ಚಿತ್ರಕಲೆ ಸ್ಪರ್ಧೆ ಏರ್ಪಡಿಸಲಾಯಿತು.



**ಕರಾಟೆ ತರಗತಿ ಉದ್ಘಾಟನೆ 4.6.2022 :**

ಅಂತರಾಷ್ಟ್ರೀಯ ಕರಾಟೆ ತರಬೇತುದಾರ ಮತ್ತು ತೀರ್ಪುಗಾರರಾದ ಕರಾಟೆ ಅಸೋಸಿಯೇಷನ್ ಆಫ್ ಇಂಡಿಯಾದ ಶ್ರೀ ದಿನೇಶ್ ನಡೆಸಿಕೊಟ್ಟರು.



**ಯಕ್ಷಗಾನ ತರಬೇತಿ ಉದ್ಘಾಟನೆ 15.6.2022**

ಯಕ್ಷಗಾನ ತರಬೇತಿಯನ್ನು, ಯಕ್ಷಗಾನ ತರಬೇತುದಾರರಾದ ಶ್ರೀ ಗಣೇಶ್ ಆಚಾರ್ಯ ಮಾಣಿಲ ಉದ್ಘಾಟಿಸಿದರು.



**ಬಿತ್ತೋತ್ಸವ 6.6.2022:** ಬಂ. ಪ್ರಾ. ಅ.ವಲಯ ಅಧಿಕಾರಿ ರಾಜೇಶ್ ಬಳಿಗಾರ್, ಪ್ರ. ಸ. ಕೃಷಿನಿರ್ದೇಶಕರಾದ, ಶ್ರೀ ನಂದನ್ ಶೆಣೈ ಬಂಟ್ವಾಳ, ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಅರಣ್ಯ ರಕ್ಷಕರಾದ ಅನಿತಾ ಹಾಗೂ ದಯಾನಂದ ಜೊತೆಗಿದ್ದರು.



**ವಿವಿಧ ಸಂಘಗಳ ಉದ್ಘಾಟನೆ 18.6.2022**

ವಿವಿಧ ಸಂಘಗಳಾದ ಕ್ರೀಡಾ ಸಂಘ, ಭಜನಾ ಸಂಘ, ಕೃಷಿ ಸಂಘ, ಇಂಗ್ಲೀಷ್ ಸಂಘ, ವಿಜ್ಞಾನ ಸಂಘ, ಸಂಸ್ಕೃತ ಸಂಘ, ಕನ್ನಡ ಹಾಗೂ ಸಾಂಸ್ಕೃತಿಕ ಸಂಘಗಳನ್ನು ಉದ್ಘಾಟಿಸಲಾಯಿತು.



**ತಬಲ–ಹಾರ್ಮೋನಿಯಂ ತರಬೇತಿ 6.6.22**

ತಬಲ ತರಬೇತುದಾರರಾಗಿ ಶ್ರೀ ಸೀತಾರಾಮ ಹೊಳ್ಳ ಬಿ.ಸಿ ರೋಡ್, ಹಾರ್ಮೋನಿಯಂ ತರಬೇತುದಾರರಾಗಿ ಅರವಿಂದ ಆಚಾರ್ಯ ಮಾಣಿಲ ಇವರು ನಡೆಸಿಕೊಟ್ಟರು.



**ಶಾಲಾ ಸಂಸತ್ತು ಅಧಿವೇಶನ 11.6.2022**

2022–23ನೇಸಾಲಿನ ಶಾಲಾ ಸಂಸತ್ತು ಅಧಿವೇಶನ ನಡೆಯಿತು. ರಾಯಿ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷರಾದ ರಶ್ಮಿತ್ ಶೆಟ್ಟಿ ವಿದ್ಯಾರ್ಥಿಗಳಿಗೆ ಶುಭಹಾರೈಸಿದರು

# ಸುಭಾಷಿತ ಮಂಜರಿ

**ಯ ಉಪೇಕ್ಷೇತ ಶತ್ರುಂ ಸ್ವಂ**
**ಪ್ರಸರಂತಂ ಯದೃಚ್ಛಯಾ ।**
**ರೋಗಂ ಚಾಲಸ್ಯಸಂಯುಕ್ತಂ**
**ಸ ಶನೈಸ್ತೇನ ಹನ್ಯತೇ ॥**

ಸ್ವೇಚ್ಛೆಯಾಗಿ ಬೆಳೆಯುತ್ತಿರುವ ಶತ್ರುವನ್ನು ಯಾವನು ಉದಾಸೀನ ಮಾಡುವನೋ, ಯಾವನು ಸೋಮಾರಿತನದಿಂದ ಕೂಡಿ ರೋಗವನ್ನು ಉದಾಸೀನ ಮಾಡುವನೋ ಅವನು ಅದರಿಂದಲೇ ನಿಧಾನವಾಗಿ ಕೊಲ್ಲಲ್ಪಡುತ್ತಾನೆ.

### ಸಂಪಾದಕೀಯ

ಆತ್ಮೀಯ ಓದುಗರೆ,

ಈ ಶೈಕ್ಷಣಿಕ ವರ್ಷ ವಿವಿಧ ವಿಭಾಗಗಳ ಪ್ರವೇಶೋತ್ಸವದೊಂದಿಗೆ ಅಧಿಕೃತ ಕಾರ್ಯಾರಂಭ ಮಾಡಿದೆ. ಎಂದಿನಂತೆ ವರ್ಷಾರಂಭದ ಎಲ್ಲಾ ಚಟುವಟಿಕೆಗಳಿಗೆ ವೇಗ ದೊರೆತಿದೆ. ಪ್ರಾಥಮಿಕ ಶಾಲಾ ವಿಭಾಗದಲ್ಲಿ ದಾಖಲಾತಿ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಇತರ ವಿಭಾಗಗಳೂ ಇದಕ್ಕೆ ಹೊರತಲ್ಲ. ಮುಂದಿನ ಸಂಚಿಕೆಯಲ್ಲಿ ಎಲ್ಲಾ ವಿಭಾಗಗಳ ಅಂಕಿ ಅಂಶಗಳೊಂದಿಗೆ ಸರಯೂ ನಿಮ್ಮ ಕೈ ಸೇರಲಿದೆ. ಹಾಗೂ ಈ ಬಾರಿ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಆರಂಭಿಸಲಾದ ಸೆಕೆಂಡರಿ ಸ್ಕೂಲ್‌ಗೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರ ಬಿ.ಕೆ (ಪ್ರಾಥಮಿಕ ಶಾಲೆ)
ಕೊಟ್ರೇಶ್ (ಪ್ರೌಢಶಾಲೆ)
ಶ್ವೇತಾ (ಸೆಕೆಂಡರಿ ಸ್ಕೂಲ್)
ಗೋವಿಂದ ನಾರಾಯಣ (ಪದವಿಪೂರ್ವ)
ಅಖಿಲಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಚೂರು


## ವಿವಿಧ ವಿಭಾಗಗಳ ಆಗತ-ಸ್ವಾಗತ ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು

**ಪ್ರಾಥಮಿಕ ಶಾಲಾ** ಪ್ರವೇಶೋತ್ಸವದಲ್ಲಿ ಉಪ್ಪಿನಂಗಡಿ ಶ್ರೀರಾಮ ಮತ್ತು ಇಂದ್ರಪ್ರಸ್ಥ ವಿದ್ಯಾಸಂಸ್ಥೆಯ ಸಂಚಾಲಕರಾದ ಶ್ರೀ ಯು.ಜಿ. ರಾಧ, ಹೈದರಾಬಾದ್ ಮೆಡಿಹಾಕ್ಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಗಿರೀಶ್ ಭಟ್, ನಿರ್ದೇಶಕರಾದ ಶ್ರೀ ಮನೋಹರ್, ಪುತ್ತೂರು ಸಹಾಯಕ ಆಯುಕ್ತರಾದ ಶ್ರೀ ಗಿರೀಶ್ ನಂದನ್, ಉಪ್ಪಿನಂಗಡಿ ಶ್ರೀರಾಮ ಶಾಲೆಯ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಸುಧೀರ್ ಟಿ.ಎಸ್, ಶ್ರೀರಾಜ್ ಗೋಪಾಲ್ ಉಡುಪಿ ಉಪಸ್ಥಿತರಿದ್ದರು.

**ಪ್ರೌಢಶಾಲಾ** ಆಗತ ಸ್ವಾಗತ ಕಾರ್ಯಕ್ರಮದಲ್ಲಿ ಹೈದರಾಬಾದ್ ಕೆ.ಪಿ.ಸಿ ಪ್ರಾಜೆಕ್ಟ್‌ನ ನಿರ್ದೇಶಕರಾದ ಶ್ರೀ ಮದಿರಾಜ್ ಸಾಯಿ ರತನ್, ವಿಶ್ವಮಲ್ಲಕಂಬ ಫೆಡರೇಶನ್ ಸಂಸ್ಥೆಯ ಸ್ಥಾಪಕ ನಿರ್ದೇಶಕರು ಮತ್ತು ಗೌರವ ಪ್ರಧಾನ ಕಾರ್ಯದರ್ಶಿಗಳು ಶ್ರೀ ಉದಯ್ ವಿ. ದೇಶ್‌ಪಾಂಡೆ, ಜಾಗತಿಕ ಬ್ರಾಂಡ್ ಕಾರ್ಯ ತಂತ್ರದ ಸಂವಹನ ಸಲಹೆಗಾರ ಮತ್ತು ನಾಯಕತ್ವ ತರಬೇತುದಾರ ಶ್ರೀ ರಾಮಮೋಹನ್ ಶೆಟ್ಟಿ, ಶಿವಮೊಗ್ಗ ಜಿಲ್ಲೆಯ ಅಬಕಾರಿ ಇಲಾಖೆ ಆಯುಕ್ತರು ಕ್ಯಾಪ್ಟನ್ ಅಜಿತ್ ಕುಮಾರ್, ಕುಂದಾಪುರದ ಸಿವಿಲ್ ಕಾಂಟ್ರಾಕ್ಟರ್ ಶ್ರೀ ಸುನಿತ್ ಹೆಗ್ಡೆ, ನೀರಾವರಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಶ್ರೀ ಅರುಣ್ ಭಂಡಾರಿ ಹಾಜರಿದ್ದರು.

**ಪದವಿಪೂರ್ವ** ವಿಭಾಗದ ಆಗತ ಸ್ವಾಗತದಲ್ಲಿ ಯಾದಗಿರಿ ಜಿಲ್ಲೆಯ ಶ್ರೀ ಲಕ್ಷ್ಮೀತಿಮ್ಮಪ್ಪ ಎಜುಕೇಶನ್ ಮತ್ತು ಚ್ಯಾರಿಟೇಬಲ್‌ನ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ನರೇಂದ್ರ ರಾಥೋಡ್, ಶ್ರೀ ಮನೋಹರ್ ಕೆ ಪವಾರ್ ನಿರ್ದೇಶಕರು, ಕರ್ನಾಟಕ ತಾಂಡ ಅಭಿವೃದ್ಧಿನಿಗಮ ನಿ ಬೆಂಗಳೂರು, ಮಂಗಳೂರಿನ ಕಾವೂರು ನಿವಾಸಿ ಡಾಕ್ಟರ್ ರಾಮಚಂದ್ರರಾವ್ ಉಡುಪಿ ಜಿಲ್ಲೆಯ ಯೋಜನಾ ನಿರ್ದೇಶಕರಾದ ಶ್ರೀ ಅರುಣ್ ಕುಮಾರ್, ಶ್ರೀ ಮಣಿಕಂಠ ರಾಥೋಡ್ ಉದ್ಯಮಿಗಳು ಯಾದಗಿರಿ, ಶ್ರೀ ಲಕ್ಷ್ಮಣ ಪವಾರ್ ಶ್ರೀಮತಿ ಸಂಗೀತ ಪವಾರ್, ಉಡುಪಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಗಳಾದ ಶ್ರೀ ಗಂಗಾಧರ ಜಿ.ಪಿ, ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಹಿರಿಯ ಪ್ರಬಂಧಕರಾದ ಶ್ರೀ ನರಸಿಂಹ ನಾಯಕ್ ಭಾಗವಹಿಸಿದ್ದರು.

ವಿದ್ಯಾಕೇಂದ್ರದ ಹಿರಿಯರಾದ ಡಾ। ಪ್ರಭಾಕರ್ ಭಟ್, ಶ್ರೀ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ, ಶ್ರೀ ರಮೇಶ್ ಎನ್ ಹಾಗೂ ವಿಭಾಗದ ಮುಖ್ಯಸ್ಥರುಗಳು ಕಾರ್ಯಕ್ರಮಗಳಲ್ಲಿ ಜೊತೆಗೂಡಿದರು.

### ವಿಶ್ವ ಯೋಗ ದಿನಾಚರಣೆ : 21.6.2022













ಪ್ರಾಥಮಿಕ ವಿಭಾಗದಲ್ಲಿ, ವಿಟ್ಲ, ರಾ.ಸ್ವಂ.ಸೇ. ಸಂಘದ ತಾಲೂಕು ಸಹಕಾರ್ಯವಾಹ ಶ್ರೀ ಶಿವಪ್ರಸಾದ್, ಶ್ರೀರಾಮ ಪ್ರೌಢಶಾಲೆ ಮತ್ತು ಸೆಕೆಂಡರಿ ಸ್ಕೂಲ್‌ನಲ್ಲಿ ಶ್ರೀ ವಿಷ್ಣು ಹೆಬ್ಬಾರ್ ದೈಹಿಕ ಶಿಕ್ಷಣ ಪರಿವೀಕ್ಷಕರು, ಪದವಿಪೂರ್ವ ವಿದ್ಯಾಲಯದಲ್ಲಿ ಮೆಸ್ಕಾಂನಲ್ಲಿ ಉದ್ಯೋಗಿಯಾಗಿರುವ ಆರ್ಲಪದವು ನಿವಾಸಿ ಶ್ರೀ ಮೋಹನ್, ಪದವಿ ವಿದ್ಯಾಲಯದಲ್ಲಿ ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ತೆಂಕಿಲ ಪುತ್ತೂರು ಇಲ್ಲಿನ ಆಡಳಿತ ಮಂಡಳಿ ಸದಸ್ಯರಾದ ಶ್ರೀ ಸುಬ್ರಹ್ಮಣ್ಯ ಕೆದಿಲ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಯೋಗ ಅಭ್ಯಾಸವನ್ನು ನಡೆಸಿಕೊಟ್ಟರು. ಹಾಗೂ ಯೋಗದಿಂದ ಆಗುವ ಪ್ರಯೋಜನಗಳನ್ನು ನೆನಪಿಸಿದರು.

## ಶಿಶುಮಂದಿರ

**ಸಾಮೂಹಿಕ ಹುಟ್ಟು ಹಬ್ಬ** 30.06.2022



ಜೂನ್ ತಿಂಗಳಲ್ಲಿ ಹುಟ್ಟಿದ 12 ಮಕ್ಕಳ ಸಾಮೂಹಿಕ ಹುಟ್ಟು ಹಬ್ಬವನ್ನು ಆಚರಣೆ ಮಾಡಲಾಯಿತು. ಪ್ರಾಥಮಿಕ ಶಾಲೆಯ ಶ್ರೀಮತಿ ಪ್ರೀತಾ ಮಾತಾಜಿಯವರು ಹುಟ್ಟು ಹಬ್ಬವನ್ನು ಯಾವ ರೀತಿ ಆಚರಿಸಬೇಕೆಂಬುದನ್ನು ಕಥೆಯ ಮೂಲಕ ತಿಳಿಸಿದರು. ಒಟ್ಟು 170 ಮಕ್ಕಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ

**ನಾಗತಂಬಿಲ : 2.6.2022**

ಪ್ರಾಥಮಿಕ ಶಾಲಾ ಪರಿಸರದಲ್ಲಿರುವ ನಾಗನ ಕಟ್ಟೆಯಲ್ಲಿ ನಾಗತಂಬಿಲ ನಡೆಯಿತು. ಡಾ। ಪ್ರಭಾಕರ್ ಭಟ್ ಮತ್ತು ಶ್ರೀಮತಿ ಕಮಲಾ ಪ್ರಭಾಕರ್ ಹಾಗೂ ವಿದ್ಯಾಕೇಂದ್ರದ ಹಿರಿಯರು ಉಪಸ್ಥಿತರಿದ್ದರು.

**ಉಚಿತ ಪಠ್ಯಪುಸ್ತಕ ವಿತರಣೆ : 2.6.2022**

2.6.2022ರಂದು ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಪಠ್ಯಪುಸ್ತಕಗಳನ್ನು ವಿತರಿಸಲಾಯಿತು.

**ಗಿಡ ನೆಡಿ, ಪರಿಸರ ಉಳಿಸಿ ಅಭಿಯಾನ: 5.6.22**

ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಎಲ್ಲಾ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಯಲ್ಲಿ ಗಿಡ ನೆಟ್ಟು, ಅದರ ಭಾವಚಿತ್ರವನ್ನು ಅಧ್ಯಾಪಕರಿಗೆ ಕಳುಹಿಸಿಕೊಟ್ಟರು.

**ಸ್ವರ ಸಾಧನ : 5.6.2022**



1ರಿಂದ 4ನೇ ತರಗತಿಯ ಮಕ್ಕಳಿಗೆ ಸ್ವರಸಾಧನ ಮತ್ತು ಕಥೆಯೊಂದಿಗೆ ಯೋಗ ಕಾರ್ಯಕ್ರಮದಲ್ಲಿ ಸ್ವರ ಸಾಧನಗಳಾದ ತಾಳ, ಧಮಿಕಿ, ಝಲ್ಲರಿ, ಕೋಲಾಟದ ಕೋಲು, ತಾಸೆ, ಡೋಲು, ಚಕ್ರತಾಳಗಳನ್ನು ಮಕ್ಕಳಿಗೆ ಪರಿಚಯಿಸಿ ಮಾಹಿತಿಯನ್ನು ನೀಡಿದರು. ಏಕತಾಳಕ್ಕೆ ಸಂಬಂಧಿಸಿದಂತೆ ಭಜನೆ, ದೇಶಭಕ್ತಿ ಗೀತೆ, ಅಭಿನಯಗೀತೆಯನ್ನು ಕಾವ್ಯಶ್ರೀ ಮಾತಾಜಿ ಹೇಳಿಕೊಟ್ಟರು. ಕಥೆಯೊಂದಿಗೆ ಯೋಗಾಸನನ್ನು ಚೈತ್ರಾ ಎನ್ ಕೆ ಮತ್ತು ದಿವ್ಯ ಕೆ ಮಾತಾಜಿಯವರು ನಡೆಸಿಕೊಟ್ಟರು.

**ಜಿಲ್ಲಾ ಮಟ್ಟಕ್ಕೆ ಆಯ್ಕೆ : 7.6.2022**

ವಿಶ್ವ ಪರಿಸರ ದಿನದ ಪ್ರಯುಕ್ತ ವಿಜಯ ಕರ್ನಾಟಕ ಪತ್ರಿಕೆಯವರು 'ಭೂಮಿ ಉಳಿಸಿ' ಎಂಬ ವಿಷಯದಲ್ಲಿ 6 ಮತ್ತು 7 ನೇ ತರಗತಿಯವರಿಗೆ ಶಾಲಾಮಟ್ಟದಲ್ಲಿ ನಡೆಸಿದ ಚಿತ್ರಕಲೆ ಸ್ಪರ್ಧೆಯಲ್ಲಿ 7 ನೇ ತರಗತಿಯ ಅನನ್ಯ ಹಾಗೂ 6ನೇ ತರಗತಿಯ ಶರಣ್ಯ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದು, ಕೊಡಿಯಾಲ್‌ಬೈಲ್ ಶಾರದಾ ವಿದ್ಯಾಲಯದಲ್ಲಿ ನಡೆದ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ.

**ಶಾಲಾ ಚುನಾವಣೆ 9.6.2022**



8 ಕ್ಷೇತ್ರಗಳಿಗೆ ನಾಲ್ಕು ಮತಗಟ್ಟೆಗಳನ್ನು ರಚಿಸಿ, EVM Appನ್ನು ಬಳಸಿಕೊಂಡು ಚುನಾವಣೆ ನಡೆಸಲಾಯಿತು. ಮುಖ್ಯೋಪಾಧ್ಯಾಯರು EVM ಆ್ಯಪ್ ಗೆ ಚಾಲನೆ ನೀಡುವುದರ ಮೂಲಕ ಈ ಮತದಾನ ಪ್ರಕ್ರಿಯೆಯನ್ನು ಉದ್ಘಾಟನೆಗೈದರು. ಚುನಾವಣಾ ಅಧಿಕಾರಿಯಾಗಿ ವೇದಾವತಿ ಕೆ ಹಾಗೂ ರಾಜೇಶ್ವರಿ ಎಂ ಕಾರ್ಯನಿರ್ವಹಿಸಿದರು.

**ಪರಿಸರಸ್ನೇಹಿ ಪ್ಲಾಸ್ಟಿಕ್ ಇಟ್ಟಿಗೆ ತಯಾರಿ: 9.6.22**

'ಪರಿಸರ ಸ್ನೇಹಿ ಪ್ಲಾಸ್ಟಿಕ್ ಇಟ್ಟಿಗೆ' ತಯಾರಿಯ ಬಗ್ಗೆ ಮಾಹಿತಿಯನ್ನು ಅಧ್ಯಾಪಕರಾದ ಶ್ರೀ ಬಾಲಕೃಷ್ಣ ನೀಡಿದರು. ವಿದ್ಯಾರ್ಥಿಗಳು ಶಾಲಾ ಪರಿಸರದಲ್ಲಿರುವ ಪ್ಲಾಸ್ಟಿಕ್‌ಗಳನ್ನು ಸಂಗ್ರಹಿಸಿ ತಾವೇ ಸ್ವತಃ ಪ್ಲಾಸ್ಟಿಕ್ ಇಟ್ಟಿಗೆಗಳನ್ನು ತಯಾರಿಸಿದರು.

**ಕೊರೋನಾ ನಿಯಂತ್ರಣ ಲಸಿಕೆ :10.6.2022**

12 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಬಾಳಿಲ ಆರೋಗ್ಯ ಕೇಂದ್ರದ ವತಿಯಿಂದ ಕೋವಿಡ್ 19 ನಿಯಂತ್ರಣ ಲಸಿಕೆ ನೀಡಲಾಯಿತು.

**ಬ್ಯಾಗ್ ವಿತರಣೆ : 11.6.2022**

ಮುಖ್ಯ ಶಿಕ್ಷಕರ ಉಪಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಬ್ಯಾಗು ವಿತರಿಸಲಾಯಿತು.

**ಅಧ್ಯಾಪಕರ ಬೈಠಕ್ 11.6.2022**

ಅಧ್ಯಾಪಕರ ಬೈಠಕ್‌ನಲ್ಲಿ ದೀರ್ಘ ಗೈರು, ಹೊಸ ಸೇರ್ಪಡೆ, ಗ್ರಾಮವಾರು ವಿದ್ಯಾರ್ಥಿಗಳ ಲೆಕ್ಕ ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

**ಪ್ರಾಂತ ವಿಜ್ಞಾನ ಮತ್ತು ಗಣಿತ ಕಾರ್ಯಾಗಾರ 11.6.2022 ಮತ್ತು 12.06.2022**

ಬೆಂಗಳೂರು ಜೈ ಗೋಪಾಲ ಗರೋಡಿಯಾ ರಾಷ್ಟ್ರೋತ್ಥಾನ ವಿದ್ಯಾಲಯ ಇಲ್ಲಿ ಎರಡು ದಿನ ನಡೆದ ಪ್ರಾಂತ ವಿಜ್ಞಾನ ಮತ್ತು ಗಣಿತ ಕಾರ್ಯಾಗಾರದಲ್ಲಿ ಪ್ರಾಥಮಿಕ ವಿಭಾಗದ ಅಧ್ಯಾಪಕರಾದ ಶ್ರೀಮತಿ ರಮ್ಯ ಜೆ ಹಾಗೂ ಕು. ಜ್ಯೋತಿಶ್ರೀ ಸಿ.ಎಂ ಭಾಗವಹಿಸಿದ್ದರು.

**ಶಾಲಾ ಸಂಸತ್ತು ಅಧಿವೇಶನ 11.6.2022**

2022-23ನೇ ಸಾಲಿನ ಶಾಲಾ ಸಂಸತ್ತುನಲ್ಲಿ ಶಾಲಾ ನಾಯಕನಾಗಿ 7ನೇ ತರಗತಿಯ ಆಕಾಶ್ ಕೆ, ಉಪನಾಯಕಿಯಾಗಿ ಅನನ್ಯ, ಸಾಂಸ್ಕೃತಿಕ ಮಂತ್ರಿಯಾಗಿ ಪವನ್ ನಾಯಕ್ ಹಾಗೂ ವೈದೇಹಿ ಪಿ ಎಸ್, ಕ್ರೀಡಾ ಮಂತ್ರಿಯಾಗಿ ಪ್ರಜ್ವಲ್ ಕೆ ಹಾಗೂ ವೈಷ್ಣವಿ, ಆರೋಗ್ಯ ಮಂತ್ರಿಯಾಗಿ ಶಮಂತ್ ಹಾಗೂ ಬ್ರಾಹ್ಮೀ ಭಟ್, ಸ್ವಚ್ಛತಾ ಮಂತ್ರಿಯಾಗಿ ಸಾತ್ವಿಕ್ ಜಿ ಶೆಟ್ಟಿ ಹಾಗೂ ರಮ್ಯ ಭಟ್, ಶಿಕ್ಷಣ ಮಂತ್ರಿಯಾಗಿ ಶ್ರೀಹರಿ ಹಾಗೂ ಅಂಕಿತ ಬಿ, ನೀರಾವರಿ ಮಂತ್ರಿಯಾಗಿ ವೈಭವ್ ಹಾಗೂ ಮೋನಿಷ ಕೆ ಎಂ, ವಾರ್ತಾ ಮಂತ್ರಿಯಾಗಿ ಅಮೃತ್ ಹಾಗೂ ದಕ್ಷ ಪ್ರಮಾಣ ವಚನ ಸ್ವೀಕರಿಸಿದರು. ವೇದಿಕೆಯಲ್ಲಿ ಸರಪಾಡಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಲೀಲಾವತಿ, ಬಾಳಿಲ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಹಿರಣ್ಮಯ, ರಾ.ಸ್ವಂ.ಸೇ ಸಂಘ ಹೊಸಂಗಡಿ ಮಂಡಲದ ಮಂಡಲ ಸಹಕಾರ್ಯವಾಹ ಶ್ರೀ ನಿತೇಶ್, ಕರಾವಳಿ ಸಾಂಪ್ರದಾಯಿಕ ಮೀನುಗಾರರ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಮೋಹನ್‌ಚಂದ್ರ ಹಾಗೂ ಅವರ ಸಹಧರ್ಮಿಣಿ ಉಮಾದೇವಿ ಉಪಸ್ಥಿತರಿದ್ದರು.

**ಹಿಂದೂ ಸಾಮ್ರಾಜ್ಯೋತ್ಸವ 13.6.2022**

ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಅಧ್ಯಾಪಕರಾದ ಶ್ರೀ ಜಿನ್ನಪ್ಪ ಏಳ್ತಿಮಾರ್‌ರವರು ಶಿವಾಜಿಯ ಆದರ್ಶಗಳನ್ನು ವಿದ್ಯಾರ್ಥಿಗಳಾದ ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

**ತಾಲೂಕು ದೈ.ಶಿ. ಅಧಿಕಾರಿ ಭೇಟಿ 14.6.2022**

ಬಂ.ತಾ.ದೈ. ಶಿಕ್ಷಣ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ವಿಷ್ಣು ನಾರಾಯಣ ಹೆಬ್ಬಾರ್ ಪ್ರಾಥಮಿಕ ವಿಭಾಗಕ್ಕೆ ಭೇಟಿ ನೀಡಿ ಶಾಲೆಯ ಕಾರ್ಯ ಚಟುವಟಿಕೆಯನ್ನು ವೀಕ್ಷಿಸಿದರು.

**ಅಧ್ಯಾಪಕರೊಂದಿಗೆ ಬೈಠಕ್: 18.6.2022**

ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರುರವರ ಮಾರ್ಗದರ್ಶನದಲ್ಲಿ ಅಧ್ಯಾಪಕರ ಬೈಠಕ್ ನಡೆಯಿತು.

**ವಿವಿಧ ಸಂಘಗಳ ಉದ್ಘಾಟನೆ 18.6.2022**

18.6.2022ರಂದು ವಿವಿಧ ಸಂಘಗಳಾದ ಕ್ರೀಡಾ ಸಂಘ, ಭಜನಾ ಸಂಘ, ಕೃಷಿ ಸಂಘ, ಇಂಗ್ಲೀಷ್ ಸಂಘ, ವಿಜ್ಞಾನ ಸಂಘ, ಸಂಸ್ಕೃತ ಸಂಘ, ಕನ್ನಡ ಹಾಗೂ ಸಾಂಸ್ಕೃತಿಕ ಸಂಘಗಳನ್ನು ಉದ್ಘಾಟಿಸಲಾಯಿತು. ವೇದಿಕೆಯಲ್ಲಿ ಹಾರ್ಮೋನಿಯಂ ತರಬೇತುದಾರರಾದ ಅರವಿಂದ ಆಚಾರ್, ತಬಲ ತರಬೇತುದಾರರಾದ ಸೀತಾರಾಮ ಹೊಳ್ಳ, ಬಿ.ಸಿ ರೋಡು, ಅಂತಾರಾಷ್ಟ್ರೀಯ ಮಟ್ಟದ ಕರಾಟೆ ತರಬೇತುದಾರರು ಹಾಗೂ ಕರಾಟೆ ಅಸೋಸಿಯೇಷನ್ ಓಫ್ ಇಂಡಿ-

ಯಾದ ತೀರ್ಪುಗಾರರಾದ ಶ್ರೀ ದಿನೇಶ್ ಕುಮಾರ್ ಹಾಗೂ ಮಂಜುಳಾ, ಭರತನಾಟ್ಯ ತರಬೇತುದಾರರು ದಾಕ್ಷಾಯಿಣಿ, ಗೋಶಾಲೆಯ ವ್ಯವಸ್ಥಾಪಕರಾಗಿ ಹಾಗೂ ಘೋಷ್ ಪ್ರಮುಖರಾಗಿ ಕಾರ್ಯನಿರ್ವಹಿಸುತ್ತಿರುವ ಉಮೇಶ್ ಕುಲಕರ್ಣಿ ಹಾಗೂ ನಾರಂಕೋಡಿಯ ಕೊರಗ ಸಮುದಾಯದ ಶ್ರೀ ಅಂಗಾರ, ಶ್ರೀಮತಿ ಬಲ್ಲು ಮತ್ತು ಶ್ರೀಮತಿ ಮೈರೆ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತಿಯಿದ್ದರು.

**ಕವಿಗೋಷ್ಠಿಯಲ್ಲಿ ಭಾಗಿ : 19.6.2022**

ರೇಡಿಯೋ ಪಾಂಚಜನ್ಯ 90.8 ಎಫ್.ಎಂ ಹಾಗೂ ಚಿಗುರೆಲೆ ಸಾಹಿತ್ಯ ಬಳಗ ಪುತ್ತೂರು ಸಹಯೋಗದಲ್ಲಿ ಬಾನುಲಿ ಕೇಂದ್ರದಲ್ಲಿ ಆಯೋಜಿಸಲಾದ ವರ್ಷಧಾರೆ ಸಾಹಿತ್ಯ ಸಂಭ್ರಮ 2022 ಕಾರ್ಯಕ್ರಮದ ಅಂಗವಾಗಿ ನಡೆದ ಕವಿಗೋಷ್ಠಿಯಲ್ಲಿ ಅಧ್ಯಾಪಕರಾದ ಕು. ಕಾವ್ಯಶ್ರೀ ಭಾಗವಹಿಸಿದರು.

**ವಿಶ್ವ ಸಂಗೀತ ದಿನಾಚರಣೆ: 21.6.2022**

4ನೇ ತರಗತಿಯ ಅಪ್ರಮೇಯ, 5ನೇ ತರಗತಿಯ ಪ್ರಚೇತ್‌ರಾಮ್ ಕಜೆ, 6ನೇ ತರಗತಿಯ ವೈಷ್ಣವಿ, ಧಾತ್ರಿ, ಅಮೂಲ್ಯ ಸಾನ್ವಿ, ಧನ್ಯ, ರಮ್ಯ, ಶ್ರೇಯಾ ಎಂ.ಜೆ, ವೈಷ್ಣವಿ, 7ನೇ ತರಗತಿಯ ವೈದೇಹಿ, ಅನನ್ಯ, ಜಸ್ಮಿತಾ, ಬ್ರಾಹ್ಮೀ ಭಟ್ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. 5ನೇ ತರಗತಿಯ ಕಾರ್ತಿಕೇಯವರಿಂದ ಯಕ್ಷಗಾನ ಭಾಗವತಿಕೆ ನಡೆಯಿತು.

**ವಿವಿಧ ಕಲಾಪ್ರಕಾರಗಳ ಉದ್ಘಾಟನೆ : 25.6.22**

ಲೀಫ್ ಆರ್ಟ್, ಭಜನೆ, ಸಂಭಾಷಣಾ ತರಬೇತಿ, ಕ್ರಾಫ್ಟ್, ವೇಣು, ಜನಪದ ನೃತ್ಯ, ಕೋಲಾಟ, ಮಣ್ಣಿನ ಮಾದರಿ ತಯಾರಿ, ಹೂ ಕಟ್ಟುವುದು ಇತ್ಯಾದಿ ಕಲಾಪ್ರಕಾರಗಳ ತರಬೇತಿಯನ್ನು ಉದ್ಘಾಟಿಸಲಾಯಿತು.

**ಚಿತ್ರಕಲೆ ತರಬೇತಿ ಉದ್ಘಾಟನೆ : 25.6.2022**



ಚಿತ್ರಕಲೆ ತರಬೇತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ತರಬೇತುದಾರ ಶ್ರೀ ಚೇತನ್ ವಿಟ್ಲ ಹಾಗೂ ಅನ್ನಪೂರ್ಣ ಮಾತಾಜಿ ಉಪಸ್ಥಿತರಿದ್ದರು.

**ಅಟಲ್ ಟಿಂಕರಿಂಗ್ ಲ್ಯಾಬ್ ಕಾರ್ಯಾಗಾರ : 29.6.22**

ವಿದ್ಯಾರ್ಥಿಗಳಿಗೆ ಅಟಲ್ ಟಿಂಕರಿಂಗ್‌ನಲ್ಲಿ ಕಾರ್ಯಾಗಾರ ಆರಂಭವಾಯಿತು. ಪ್ರೌಢಶಾಲೆಯ ಅಧ್ಯಾಪಕರಾದ ರೋಹಿಣಿ ಮಾತಾಜಿ ಈ ಕಾರ್ಯಾಗಾರ ನಡೆಸಿಕೊಟ್ಟರು.

**ಭಾರತ ದರ್ಶನ : 29.6.2022**

ಮುಖ್ಯೋಪಾಧ್ಯಾಯರಾದ ಶ್ರೀ ರವಿರಾಜ್ ಶ್ರೀಮಾನ್ ಭಾರತದ ಕುರಿತಾಗಿ ಸಂಕ್ಷಿಪ್ತವಾಗಿ ವಿದ್ಯಾರ್ಥಿಗಳಿಗೆ ವಿವರಿಸಿದರು

## ಪ್ರೌಢಶಾಲೆ

**ಆರೋಗ್ಯ, ಸುರಕ್ಷತೆಯ ಬಗ್ಗೆ ಮಾಹಿತಿ ಕಾರ್ಯಕ್ರಮ 03.06.22**



ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಮಧುಕರ ಸಭಾಂಗಣದಲ್ಲಿ ವಿನುತ ಮಾತಾಜಿ, ಗಾಯತ್ರಿ ಮಾತಾಜಿ ಹಾಗೂ ಸೌಮ್ಯ ಮಾತಾಜಿ ನಡೆಸಿಕೊಟ್ಟರು.

**ರೈತ ಮಕ್ಕಳ ಸಂವಾದ ಕಾರ್ಯಕ್ರಮ 03.06.22**


ಮೂಡಬಿದ್ರೆ ಆಳ್ವಾಸ್ ಕಾಲೇಜಿನಲ್ಲಿ ನಡೆದ ಮುಖ್ಯಮಂತ್ರಿ ಮತ್ತು ರೈತ ಮಕ್ಕಳ ಸಂವಾದ ಕಾರ್ಯಕ್ರಮದಲ್ಲಿ 41 ವಿದ್ಯಾರ್ಥಿಗಳು ಭಾಗವಹಿಸಿದರು. ಮಕ್ಕಳ ಸಂಯೋಜನೆಯನ್ನು ಶ್ರೀ ಜಯರಾಮ್ ಶ್ರೀಮಾನ್ ಮತ್ತು ಶ್ರೀ ಪುರುಷೋತ್ತಮ ಶ್ರೀಮಾನ್ ಆಯೋಜಿಸಿದ್ದರು.

**10ನೇ ತರಗತಿ ಪೋಷಕರ ಸಭೆ 8.6.22**



10ನೇ ತರಗತಿ ವಿದ್ಯಾರ್ಥಿಗಳಿಗೆ ಎರಡು ಹಂತದಲ್ಲಿ ನಡೆದ ಸಭೆಯಲ್ಲಿ "ಪೋಷಕರ ಸಹಕಾರ ಮತ್ತು ಉತ್ತಮ ಸಂಸ್ಕಾರವಿದ್ದಾಗ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರಗತಿಯನ್ನು ಹೊಂದಲು ಸಾಧ್ಯ" ಎಂದು ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು ಶುಭ ಹಾರೈಸಿದರು. ವೇದಿಕೆಯಲ್ಲಿ ಸಂಚಾಲಕರು, ಸಹ ಸಂಚಾಲಕರು ಆಡಳಿತ ಮಂಡಳಿ ಸದಸ್ಯರು, ಮುಖೋಪಾಧ್ಯಾಯರು ಉಪಸ್ಥಿತರಿದ್ದರು. 186 ಪೋಷಕರು ಸಭೆಯಲ್ಲಿ ಭಾಗವಹಿಸಿದ್ದರು. ಶ್ರೀ ಗೋಪಾಲ್ ಶ್ರೀಮಾನ್ ಸ್ವಾಗತಿಸಿ ಪ್ರಾಸ್ತವಿಕ ಮಾತುಗಳನ್ನಾಡಿದರು. ಶ್ರೀಮತಿ ಸೌಮ್ಯ ಪಿ ಮಾತಾಜಿ ವಂದಿಸಿದರು.

**ಹಿಂದು ಸಾಮ್ರಾಜ್ಯ ದಿನೋತ್ಸವ 13.6.22**




ಶ್ರೀ ರಾಧಾಕೃಷ್ಣ ಅಡ್ಯಂತಾಯ ಶ್ರೀಮಾನ್ ಇವರು ದೀಪ ಬೆಳಗಿಸಿ ಪುಷ್ಪಾರ್ಚನೆಗೈದು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಹಿರಿಯ ಶಿಕ್ಷಕರಾದ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ವಿದ್ಯಾರ್ಥಿ ಪ್ರೇರಣಾಗೀತೆ ಹಾಡಿ ಆಕಾಶ್ ನಿರೂಪಿಸಿ,ಭೂಷಣ್ ಸ್ವಾಗತಿಸಿ ಜಯಶ್ರೀ ಧನ್ಯವಾದಗಳನ್ನು ತಿಳಿಸಿದಳು.

**ಸಂತ ಕಬೀರದಾಸ ಜಯಂತಿ ಆಚರಣೆ 14.06.22**

ಸಂತ ಕಬೀರದಾಸ ಜಯಂತಿ ಆಚರಣೆಯ ಕಾರ್ಯಕ್ರಮವನ್ನು ಶ್ರೀ ವಿಷ್ಣು ಹೆಬ್ಬಾರ್ ದೀಪ ಬೆಳಗಿಸಿ ಪುಷ್ಪಾರ್ಚನೆಗೈದು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಹಿರಿಯ ಶಿಕ್ಷಕರಾದ ಗೋಪಾಲ್ ಶ್ರೀಮಾನ್ ಸಂತ ಕಬೀರ ದಾಸರ ತತ್ವ ಬೋಧನೆಗಳು ಹೇಗೆ ಆದರ್ಶವಾಗಿದೆ ಎಂಬುವುದನ್ನು ಅವರ ಜೀವನ ಸಾಧನೆಗಳ ಮೂಲಕ ತಿಳಿಸಿ ದೋಹಾಗಳು ಎಷ್ಟು ಶ್ರೇಷ್ಠ ಎಂಬುದನ್ನು ವಿದ್ಯಾರ್ಥಿಗಳಿಗೆ ಮನನ ಮಾಡಿದರು.

**ಜಿಲ್ಲಾ ಶಾರೀರಿಕ ಶಿಕ್ಷಣ ಪರಿವೀಕ್ಷಣ ಅಧಿಕಾರಿಯವರ ಭೇಟಿ ದಿನಾಂಕ 15.6.22**

ದಕ್ಷಿಣ ಕನ್ನಡ ಜಿಲ್ಲಾ ಶಾರೀರಿಕ ಶಿಕ್ಷಣ ಪರಿವೀಕ್ಷಣ ಅಧಿಕಾರಿಯವರು ಮತ್ತು ತಾಲೂಕು ಶಾರೀರಿಕ ಶಿಕ್ಷಣ ಅಧಿಕಾರಿಯವರು ಭೇಟಿ ನೀಡಿ ನೂತನ ಪಾಕಶಾಲೆ ವಿದ್ಯಾರ್ಥಿಗಳ ಸಾಮೂಹಿಕ ಭೋಜನ ವ್ಯವಸ್ಥೆ ವೀಕ್ಷಣೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಶಿಶುಮಂದಿರಕ್ಕೂ ಭೇಟಿ ನೀಡಿ ಸಂತಸ ವ್ಯಕ್ತ ಪಡಿಸಿದರು.

**ತಾಲೂಕು ಶಾರೀರಿಕ ಶಿಕ್ಷಕರ ಒಂದು ದಿನದ ಕಾರ್ಯಾಗಾರ ದಿನಾಂಕ 16.6.22**

ತಾಲೂಕು ಶಾರೀರಿಕ ಶಿಕ್ಷಕರ ಒಂದು ದಿನದ ಕಾರ್ಯಾಗಾರವನ್ನು ದಕ್ಷಿಣ ಕನ್ನಡ ಜಿಲ್ಲಾ ಶಾರೀರಿಕ ಶಿಕ್ಷಣ ಪರಿವೀಕ್ಷಣಾಧಿಕಾರಿಗಳು ದೀಪ ಬೆಳಗಿಸಿ ಭಾರತ ಮಾತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ಬಂ.ತಾ. ಕ್ಷೇತ್ರ ಶಿಕ್ಷಣಾಧಿಕಾರಿಯವರು ಶಾರೀರಿಕ ಶಿಕ್ಷಣ ಪರಿವೀಕ್ಷಣಾಧಿಕಾರಿಯವರು ವಿದ್ಯಾಕೇಂದ್ರದ ಸಹಸಂಚಾಲಕರು ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾದ್ಯಾಯರು ಶಾ.ಶಿ. ಸಂಘದ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಸಂಸ್ಥಾಪಕರೊಂದಿಗೆ ಶಿಕ್ಷಕರ ಸಭೆ 23.06.2022**

ಶೈಕ್ಷಣಿಕ ವರ್ಷದ ಮೊದಲನೆಯ ಸಭೆ ಸಂಸ್ಥಾಪಕರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರ ಜೊತೆ ನಡೆಯಿತು. ಅವರು ಸಭೆಯಲ್ಲಿ ಶಿಕ್ಷಕರಿಗೆ ಶೈಕ್ಷಣಿಕ ವರ್ಷದ ಯೋಜನೆಗಳ ಬಗ್ಗೆ ಮಾರ್ಗದರ್ಶನ ನೀಡಿದರು.

**ಶಾಲಾ ಸಂಸತ್ತು ಚುನಾವಣೆ 25.06.22**

ಶಾಲಾ ಸಂಸತ್ತಿನ ರಚನೆಗಾಗಿ ಇ.ವಿ.ಎಮ್ ಬಳಸಿಕೊಂಡು ಮತದಾನ ನಡೆಸಲಾಯಿತು. ಸ್ವರಾಜ್ಯ ಮತ್ತು ಸ್ವದೇಶಿ ಪಕ್ಷಗಳಲ್ಲಿ 36 ಕ್ಷೇತ್ರಗಳಿಗೆ 72 ಅಭ್ಯರ್ಥಿಗಳು ಸ್ಪರ್ಧಿಸಿದರು. ವಿದ್ಯಾರ್ಥಿಗಳು ಗುರುತಿನ ಚೀಟಿಯೊಂದಿಗೆ ತಮ್ಮ ಹಕ್ಕನ್ನು ಚಲಾಯಿಸಿದರು. ಚುನಾವಣಾ ಅಧಿಕಾರಿ ಶ್ರೀ ಪ್ರಶಾಂತ್ ಎಸ್, ಶ್ರೀ ಶಿವರಾಜ್, ಶ್ರೀ ಜಯಂತ್ ಜೊತೆಗೆ ಎಲ್ಲಾ ಶಿಕ್ಷಕ ವರ್ಗದವರೂ ಸಹಕರಿಸಿದರು.

**ಮಹಾಪುರುಷರ ಕಥಾ ಸರಣಿ 27.06.22**

ಸರಸ್ವತಿ ವಂದನಾ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪಕರಾದ ಮಾನನೀಯ ಡಾ। ಕೇಶವ ಬಲಿರಾಮ ಹೆಡಗೆವಾರ್‌ರವರ ಜೀವನ ಚರಿತ್ರೆಯನ್ನು ಹಿರಿಯ ಅಧ್ಯಾಪಕರಾದ ಜಿನ್ನಪ್ಪ ಶ್ರೀಮಾನ್ ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದ್ವಿತೀಯ ಸರ ಸಂಘ ಚಾಲಕರಾದ ಮಾನನೀಯ ಮಾಧವ ಸದಾಶಿವ ರಾವ್ ಗೋಳವಲ್ಕರ್ (ಗುರೂಜಿ) ಇವರ ಜೀವನ ಚರಿತ್ರೆಯನ್ನು ಹಿರಿಯ ಅಧ್ಯಾಪಕರಾದ ಗೋಪಾಲ್ ಶ್ರೀಮಾನ್ ತಿಳಿಸಿಕೊಟ್ಟರು.

## ಸೆಕೆಂಡರಿ ಸ್ಕೂಲ್

ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿಗಳಿಗೆ ದಿನಾಂಕ 21/06/2022ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಬಂಟ್ವಾಳ ತಾಲೂಕಿನ ದೈ.ಶಿ. ಶಿಕ್ಷಕ ಸಂಘದ ಅಧಿಕಾರಿಗಳಾದ ಶ್ರೀ ವಿಷ್ಣು ನಾರಾಯಣ ಹೆಬ್ಬಾರ್ ಇವರು "ಯೋಗದ ಬಗ್ಗೆ ಮಾಹಿತಿ ನೀಡಿದರು. ಉಪಪ್ರಾಚಾರ್ಯರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಮತ್ತು ಬೋಧಕ ಬೋಧಕೇತರ ವೃಂದದವರು ಭಾಗವಹಿಸಿದರು.

**ಆರೋಗ್ಯ ಮತ್ತು ನೈರ್ಮಲ್ಯದ ಕುರಿತು ಮಾಹಿತಿ 23/06/2022**

ಡಾ। ಕಮಲ ಪ್ರಭಾಕರ್‌ಭಟ್‌ರವರು ವಿದ್ಯಾರ್ಥಿನಿಯರಿಗೆ ತಮ್ಮ ಆರೋಗ್ಯ ಮತ್ತು ನೈರ್ಮಲ್ಯದ ಬಗ್ಗೆ ಮಾಹಿತಿ ಹಾಗೂ ಸಾಮಾಜಿಕ ನಡವಳಿಕೆಯನ್ನು ಹೇಗೆ ಉತ್ತಮಗೊಳಿಸಬೇಕೆಂಬುದನ್ನು ತಿಳಿಸಿದರು.

**ಹಿಂದೂ ಸಾಮ್ರಾಜ್ಯ ದಿನ 19.06.22**

ವೀರ ಶಿವಾಜಿಯ ಬದುಕು ಪ್ರತಿಯೊಬ್ಬ ಹಿಂದುವಿನ ಬದುಕಿನಲ್ಲಿ ಅನಾವರಣಗೊಂಡಾಗ ಮಾತ್ರ ಭವ್ಯ ಭಾರತ ನಿರ್ಮಾಣವಾಗಲು ಸಾಧ್ಯ ಎಂದು ಶ್ರೀರಾಮ ಸೌಹಾರ್ದ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಸುಜಿತ್ ಕೊಟ್ಟಾರಿ ಇವರು ಪ. ಪೂ. ವಿಭಾಗದಲ್ಲಿ ಆಯೋಜಿಸಲಾದ ಹಿಂದೂ ಸಾಮ್ರಾಜ್ಯ ದಿನದ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿ ನುಡಿದರು. ಅಧ್ಯಕ್ಷತೆಯನ್ನು ದೈಹಿಕ ಉಪನ್ಯಾಸಕ ಶ್ರೀ ಕರುಣಾಕರ ಇವರು ವಹಿಸಿದ್ದರು.

## ಪದವಿ

**ವಿಶ್ವ ಪರಿಸರ ದಿನಾಚರಣೆ – 05.06.22**

ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳಿಂದ "ವಿಶ್ವ ಪರಿಸರ ದಿನಾಚರಣೆ" ಪ್ರಯುಕ್ತ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಯಲ್ಲಿ ಹಣ್ಣಿನ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

**ಅಂತರ್ ಕಾಲೇಜು ಫೆಸ್ಟ್‌ನಲ್ಲಿ ದ್ವಿತೀಯ ಸ್ಥಾನ – 06.06.22**

ಎ.ಜೆ ಇನ್ಸಿಟ್ಯೂಟ್ ಆಫ್ ಎಂಜಿನಿಯರಿಂಗ್ & ಟೆಕ್ನಾಲಜಿ , ಇಲ್ಲಿ ನಡೆದಿರುವಂತಹ ಅಂತರ್ ಕಾಲೇಜು ಫೆಸ್ಟ್ "ಆಕಾರ್ " ಇದರಲ್ಲಿ ದ್ವಿತೀಯ ಬಿಕಾಂ ವಿದ್ಯಾರ್ಥಿಯಾದ ಲಿತಿನ್ ಇವರು ಲೂಡೋ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ. ಇವರಿಗೆ ವಾಣಿಜ್ಯ ವಿಭಾಗದ ಉಪನ್ಯಾಸಕರಾದ ಶ್ರೀ ರಂಜಿತ್ ಶ್ರೀಮಾನ್ ಹಾಗೂ ಸಾಂಸ್ಕೃತಿಕ ಸಂಘದ ಸಂಯೋಜಕಿ ಶ್ರೀಮತಿ ವಿನುತ ಲಕ್ಷ್ಮೀ ಇವರು ಪ್ರಮಾನ ಪತ್ರ ನೀಡಿ ಗೌರವಿಸಿದರು.

**ಸಿ.ಇ.ಟಿ ಕ್ರಾಷ್ ಕೋರ್ಸ್‌ನ ಸಮಾರೋಪ ಸಮಾರಂಭ – 07.06.22**

ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷ ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು ದೇಶ ಅಭಿವೃದ್ಧಿಯತ್ತ ಸಾಗಬೇಕಾದರೆ ಸಂಶೋಧನೆ ಕ್ಷೇತ್ರ ಅತ್ಯಗತ್ಯ. ಇಂತಹ ಸಂಶೋಧನಾ ಕ್ಷೇತ್ರ ಮುಂದುವರಿಯಬೇಕಾದರೆ, ವಿದ್ಯಾರ್ಥಿಗಳು, ಕಲಿಕೆಯೊಂದಿಗೆ ರಾಷ್ಟ್ರೀಯತೆಯನ್ನು ಮೈಗೂಡಿಸಿ, ಸಂಶೋಧನಾ ಕ್ಷೇತ್ರಕ್ಕೆ ತಮ್ಮ ಕೊಡುಗೆಯನ್ನು ನೀಡಿ ದೇಶವನ್ನು ಪ್ರಗತಿಯತ್ತ ಸಾಗಿಸಬೇಕು ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಪದವಿ ವಿದ್ಯಾರ್ಥಿಗಳಿಗೆ ಉಮಾಶಿವ ಕ್ಷೇತ್ರ ಗೇರುಕಟ್ಟೆ ಇಲ್ಲಿನ ಅಧ್ಯಕ್ಷ ಮತ್ತು Rtd. BSNL ಉದ್ಯೋಗಿ ರಾಕೋಡಿ ಈಶ್ವರ ಭಟ್ ಇವರು ಪ್ರೋತ್ಸಾಹಧನ ವಿತರಿಸಿದರು. ನಿವೃತ್ತ ಸೇನಾಧಿಕಾರಿ ಶ್ರೀ ಪ್ರಕಾಶ್ ಕುಕ್ಕಿಲ ಇವರು ಪದವಿಪೂರ್ವ ಶಿಕ್ಷಣದ ನಂತರದ ಹಂತಗಳ ಬಗ್ಗೆ ಮಾಹಿತಿ ನೀಡಿದರು.

**"Internship and project planning" ಕಾರ್ಯಾಗಾರ – 11.06.22**

ಪ್ರಭೋದ ವಾಣಿಜ್ಯ ಸಂಘ ಹಾಗೂ IQAC ವತಿಯಿಂದ " Internship and project planing " ಎಂಬ ವಿಷಯದ ಕುರಿತು ಒಂದು ದಿನದ ಕಾರ್ಯಾಗಾರ ಸಾಧನ ಸಭಾಭವನದಲ್ಲಿ ನಡೆಯಿತು. ಕಾರ್ಯಾಗಾರವನ್ನು ಮೂಡಬಿದಿರೆಯ ಆಳ್ವಾಸ್ ಸಂಸ್ಥೆಯ, ವಾಣಿಜ್ಯ ವಿಭಾಗದ ಸಂಯೋಜಕರಾದ ಶ್ರೀ ಅಶೋಕ್ ಕೆ ಜೆ ಹಾಗೂ ಸಂಖ್ಯಾಶಾಸ್ತ್ರ ವಿಭಾಗದ ಉಪನ್ಯಾಸಕಿಯಾದ ಕು. ಶಿಲ್ಪಾ ಭಟ್ ಎನ್ ಎಚ್ ಇವರು ನಡೆಸಿಕೊಟ್ಟರು.

**ಭಾರತ ಭೂಪಟ ಪರಿಚಯ 25–06–22**

ವಿದ್ಯಾಕೇಂದ್ರದ ಎಲ್ಲಾ ವಿಭಾಗದ ಬೋಧಕ–ಬೋಧಕೇತರ ವರ್ಗದವರಿಗೆ ಭಾರತ ಭೂಪಟ ಪರಿಚಯ ಕಾರ್ಯಕ್ರವನ್ನು ನಡೆಸಲಾಯಿತು. ಪದವಿ ವಿದ್ಯಾಲಯದ ಪ್ರಾಂಶುಪಾಲರು ಶ್ರೀ ಕೃಷ್ಣಪ್ರಸಾದ್ ಅವಧಿಯನ್ನು ನಡೆಸಿಕೊಟ್ಟರು. ಸಂಸ್ಥೆಯ ಸ್ಥಾಪಕರು ಹಾಗೂ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ।ಪ್ರಭಾಕರ ಭಟ್, ಕಲ್ಲಡ್ಕರವರು ಮಾರ್ಗದರ್ಶನವನ್ನು ಮಾಡಿದರು. ಈ ಬೈಠಕ್ ನಲ್ಲಿ ರಾಷ್ಟ್ರ ಸೇವಿಕಾ ಸಮಿತಿಯ ದ. ಪ್ರಾಂತದ ಕಾರ್ಯಕಾರಣಿ ಸದಸ್ಯರಾದ ಶ್ರೀಮತಿ ಕಮಲ ಪ್ರಭಾಕರ ಭಟ್, ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಲಕ್ಷ್ಮೀ ರಘುರಾಜ್‌ರವರು ಉಪಸ್ಥಿತರಿದ್ದರು. ಪ್ರೌಢಶಾಲಾ ವಿಭಾಗದ ಗೋಪಾಲ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.

**ವಿಚಾರ ಸಂಕಿರಣದಲ್ಲಿ ವಿಷಯ ಪ್ರಸ್ತುತಿ –28.06.22**

ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯ ಸುಬ್ರಹ್ಮಣ್ಯ ಇಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ 2020 ಪರಿಷ್ಕೃತ ಪದವಿ ಮಟ್ಟದ ಇತಿಹಾಸ ಪಠ್ಯಗಳ ಅವಲೋಕನಕ್ಕೆ ಸಂಬಂಧಿಸಿದಂತೆ ಒಂದು ದಿನದ ರಾಜ್ಯ ಮಟ್ಟದ ವಿಚಾರ ಸಂಕಿರಣ ನಡೆಯಿತು . ಈ ವಿಚಾರ ಸಂಕಿರಣದಲ್ಲಿ ಪದವಿ ಕಾಲೇಜಿನ ಕಲಾ ವಿಭಾಗದ ಇತಿಹಾಸ ಉಪನ್ಯಾಸಕರಾದ ಗಂಧರ್ವ ಶ್ರೀಮಾನ್ ರವರು "Trade and Commerce" ಎಂಬ ವಿಷಯವನ್ನು ಪ್ರಸ್ತುತಿಪಡಿಸಿರುತ್ತಾರೆ.

**ಸೆಮಿನಾರ್ ನಲ್ಲಿ ಭಾಗಿ – 29.06.22**


ಬೆಸೆಂಟ್ ವುಮೆನ್ಸ್ ಕಾಲೇಜು ಮಂಗಳೂರು ಇಲ್ಲಿ ನಡೆದಂತಹ " 2ನದ ಸೆಮಿಸ್ಟರ್– ಯು.ಜಿ ಇಂಗ್ಲಿಷ್ ಸಿಲೆಬಸ್"ನ ಮಾಹಿತಿ ಕಾರ್ಯಾಗಾರದಲ್ಲಿ ನಮ್ಮ ಕಾಲೇಜಿನ ಇಂಗ್ಲಿಷ್ ಉಪನ್ಯಾಸಕಿ ಶ್ರೀಮತಿ ಶ್ರೀದೇವಿ ಮಾತಾಜಿ ಭಾಗವಹಿಸಿದ್ದರು.



**ವನ ಮಹೋತ್ಸವ 5.6.22:** ಬಾಳ್ತಿಲ ಗ್ರಾಮ ಪಂಚಾಯತ್ ಅಧ್ಯಕ್ಷೆ ಭ. ಹಿರಣ್ಮಯಿ, ಶ್ರೀ ಗೋಪಾಲ್ ಶೆಣೈ, ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ಅತಿಥಿಗಳು ಗಿಡನೆಟ್ಟು ನೀರುಣಿಸಿ ಮಾದರಿಯಾದರು.



ಸಂಭಾಷಣ ಶಿಬಿರ 09.06.22: ಸಂಸ್ಕೃತ ಸಂಭಾಷಣಾ ಶಿಬಿರವನ್ನು ಶ್ರೀ ವಸಂತ ಮಾಧವ ಉದ್ಘಾಟಿಸಿದರು. ಶೀ ಮಹೇಂದ್ರ ಶ್ರೀಮಾನ್, ಶ್ರೀಮತಿ ಪ್ರಸನ್ನ ಮಾತಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.




ಶಾ.ಶಿ.ಶಿಕ್ಷಕರ ಕಾರ್ಯಾಗಾರದಲ್ಲಿ ಜಿಲ್ಲಾ ದೈ.ಶಿಕ್ಷಣಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ದೈ.ಶಿ.ಶಿಕ್ಷಕರ ಸಂಘದ ಪದಾಧಿಕಾರಿಗಳು, ಸಹಸಂಚಾಲಕರು ಉಪಸ್ಥಿತರಿದ್ದರು.



ತಬಲ ಮತ್ತು ಹಾರ್ಮೋನಿಯಂ ತರಗತಿ ಉದ್ಘಾಟನೆ 30.06.22ರಂದು ನಡೆಯಿತು. ಶ್ರೀ ಸೀತಾರಾಮ ಆಚಾರ್ಯ ತರಗತಿಯನ್ನು ನಡೆಸಿದರು. ಶ್ರೀ ಗೋಪಾಲ ಶ್ರೀಮಾನ್, ಸಂಯೋಜಕರಾದ ದೀಕ್ಷಿತಾ ಮಾತಾಜಿ ಉಪಸ್ಥಿತರಿದ್ದರು.



ಸಾಮೂಹಿಕ ಹುಟ್ಟುಹಬ್ಬ ಆಚರಣೆ ಮತ್ತು ಭಜನಾ ಕಾರ್ಯಕ್ರಮ (30.06.22)ದಲ್ಲಿ ಜ್ಯೋತಿ ಪ್ರಕಾಶ್ ಸರ್ವಿಸ್ ಸ್ಟೇಷನ್ ಇದರ ಮಾಲಕರು ಶ್ರೀ ಜಗದೀಶ್ ಮತ್ತು ಶ್ರೀಮತಿ ಶಾಲಿನಿ, ಪದವಿ ವಿಭಾಗದ ಶ್ರೀ ಯತಿರಾಜ್ ಶ್ರೀಮಾನ್, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



ಪ್ರಮಾಣ ವಚನ ಸ್ವೀಕಾರ ಸಮಾರಂಭ (30.06.22)ದಲ್ಲಿ ಮುಖ್ಯೋಪಾಧ್ಯಾಯರು ಶಾಲೆಯ ಸಭಾಪತಿ ಮತ್ತು ಶಾಲೆಯ ಮುಖ್ಯ ಮಂತ್ರಿಗೆ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ನಡೆಸಿಕೊಟ್ಟರು.

## ಪದವಿ



**ಕುಣಿತ ಭಜನೆ (01.06.22):**

ಸುಧೆಕಾರಿನ ರಕ್ತೇಶ್ವರಿ ಸನ್ನಿಧಿಯ ಮಹಾಕಲಶೋತ್ಸವದ ಹೊರೆಕಾಣಿಕೆಯ ಮೆರವಣಿಗೆಯಲ್ಲಿ ಪದವಿ ವಿದ್ಯಾರ್ಥಿಗಳು ಕುಣಿತ ಭಜನೆಯ ಮೂಲಕ ಭಾಗವಹಿಸಿ, ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದರು.



**ಕಲಿಕೆಯೊಂದಿಗೆ ಗಳಿಕೆ (02.06.22) :** ಪ್ರಭೋದ ವಾಣಿಜ್ಯ ಸಂಘದ ವತಿಯಿಂದ ನಡೆದ ಈ ಕಾರ್ಯಾಗಾರದಲ್ಲಿ ಎಸ್.ಬಿ.ಐ ಬಂಟ್ವಾಳ ಬ್ಯಾಂಚ್ ಮ್ಯಾನೇಜರ್ ಶ್ರೀ ಸಂತೋಷ್ ಎಂ ಮಾಹಿತಿ ನೀಡಿದರು. ಕೀರ್ತಿ ಸ್ವಾಗತಿಸಿ, ನಿರೂಪಿಸಿದರು, ನಿಶ್ಮಿತಾ ವಂದಿಸಿದರು.




**ಸಿ.ಇ.ಟಿ ಕ್ರಾಷ್ ಕೋರ್ಸ್ (07.06.22):** ಸಮಾರೋಪ ಸಮಾರಂಭದಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷ ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು.



**"ಪ್ರೇರಣಾ" ವಾರ್ಷಿಕ ಶಿಬಿರ 10.06.22 - 12.06.22**

ಭವಿಷ್ ಘಟಕದ "ಪ್ರೇರಣಾ" ವಾರ್ಷಿಕ ಶಿಬಿರವು ವಿವೇಕಾನಂದ ಕಾಲೇಜು ಪುತ್ತೂರಿನಲ್ಲಿ ದಿ:10.06.2022 ರಿಂದ 12.06.2022ರ ವರೆಗೆ ನಡೆದಿದ್ದು ನಮ್ಮ ಕಾಲೇಜಿನ 50 ವಿದ್ಯಾರ್ಥಿಗಳು ಭಾಗವಹಿಸಿ ಪ್ರಯೋಜನ ಪಡೆದುಕೊಂಡರು.




ಪ್ರಭೋದ ವಾಣಿಜ್ಯ ಸಂಘ ಹಾಗೂ IQAC ವತಿಯಿಂದ"Internship and project planing "ಎಂಬ ವಿಷಯದ ಕುರಿತು ನಡೆದ (11.06.22) ಕಾರ್ಯಾಗಾರವನ್ನು ಮೂಡಬಿದಿರೆಯ ಆಳ್ವಾಸ್ ಸಂಸ್ಥೆಯ, ವಾಣಿಜ್ಯ ವಿಭಾಗದ ಸಂಯೋಜಕರಾದ ಶ್ರೀ ಅಶೋಕ್ ಕೆ ಜೆ ಹಾಗೂ ಸಂಖ್ಯಾಶಾಸ್ತ್ರ ವಿಭಾಗದ ಕು. ಶಿಲ್ಪಾ ಭಟ್ ಎನ್ ಎಚ್ ಇವರು ನಡೆಸಿಕೊಟ್ಟರು



**ಭಾರತ ಭೂಪಟ ಪರಿಚಯ:** ವಿದ್ಯಾಕೇಂದ್ರದ ಎಲ್ಲಾ ಬೋಧಕ–ಬೋಧಕೇತರರಿಗೆ ನಡೆಸಿ ಭಾರತ ಭೂಪಟ ಪರಿಚಯ ಕಾರ್ಯಕ್ರಮವನ್ನು ಶ್ರೀ ಕೃಷ್ಣಪ್ರಸಾದ್ ನಡೆಸಿಕೊಟ್ಟರು. ಕಾರ್ಯಕ್ರಮದ ಕೊನೆಯಲ್ಲಿ ವಿದ್ಯಾಕೇಂದ್ರದ ಹಿರಿಯರಾದ ಡಾ। ಪ್ರಭಾಕರ ಭಟ್ ಕಲ್ಲಡ್ಕ ಇವರು ಮಾರ್ಗದರ್ಶನ ಮಾಡಿದರು.

# ಶ್ರೀರಾಮ ಪದವಿಪೂರ್ವ ವಿದ್ಯಾಲಯ

ಹನುಮಾನ್ ನಗರ ಕಲ್ಲಡ್ಕ, ಬಂಟ್ವಾಳ ತಾಲೂಕು 574222

## ದ್ವಿತೀಯ ಪಿಯುಸಿ ಫಲಿತಾಂಶ 2021–22

**92%**

ವಿಶಿಷ್ಟ ಶ್ರೇಣಿ: 60
ಪ್ರಥಮ ಶ್ರೇಣಿ: 135

### ವಿಭಾಗವಾರು ಅತ್ಯಧಿಕ ಅಂಕಗಳಿಸಿದವರು

| ವಿಜ್ಞಾನ | ವಾಣಿಜ್ಯ | ಕಲಾ |
|---|---|---|
| ದೀಪೇಶ್ 560 | ಆದಿತ್ಯ ಮೈಥಿಲಿ 586 | ವರ್ಷಿಣಿ 566 |

### ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು

**ವಿಜ್ಞಾನ ವಿಭಾಗ**

ದೀಪಕ್ 558, ಅಮೃತಾ 546, ಮನೀಶ್ 544, ಶ್ರೀನಿಧಿ 537, ನಿತಿನ್ 528, ಹರ್ಷಿತಾ 525, ಸಾಧನಾ 522

**ವಾಣಿಜ್ಯ ವಿಭಾಗ**

ಚೈತನ್ಯ 583, ಪ್ರಜ್ಞಾ 581, ಬೃಂದಶ್ರೀ 579, ವೈಷ್ಣವಿ 575, ಸರ್ವೇಶ್ 571, ಮೇಘ 570, ಮನ್ವಿತಾ 567, ಶ್ರೀಕುಮಾರ್ 566, ಶ್ರೇಯಸ್ 566

ವಂಶಿ 566, ಅನಘಾ 565, ಸಚಿತ್ 563, ಅನನ್ಯ 561, ಪ್ರತೀಕ್ಷಾ 560, ಶ್ರೀರಕ್ಷಾ 560, ದೀಪಕ್ 557, ಅನ್ವಿತಾ 557, ಪ್ರೇಕ್ಷಿತಾ 555, ನೂತನ್ 555

ಹರ್ಷಿತಾ 552, ರಕ್ಷಾ 552, ಮಿನಿಷಾ 550, ಅಂಜಲಿ 548, ಹರ್ಷಿತಾ 545, ದೀಕ್ಷಾ 543, ಮಾಧವ 542, ಕಿರಣ್ 541, ಸೌಜನ್ಯ 541, ನವನೀತ್ 541, ವಾತ್ಸಲ್ಯ 540

ಸೌಭಾಗ್ಯ 539, ಮಾನಸ 539, ಗುರುದತ್ 539, ಶಶಾಂಕ್ 537, ಶಿವಕಿರಣ್ 532, ರಕ್ಷಿತಾ 531, ಯತೀಶ್ 531, ಶ್ರೀಜಿತ್ 524, ರಿತೇಶ್ 523, ಸಿಂಚನ 523, ಮನೀಶ್ 522

ಜತೇಶ್ 517, ಶ್ರಾವ್ಯ 517, ಲಿಖಿತಾ 515, ಮೋಕ್ಷಿತ್ 515, ಲಹರಿ 514, ಶಮಿತ್ 510, ಧನ್ಯ 510

**ಕಲಾ ವಿಭಾಗ**

ಕೀರ್ತಿ 556, ಪದ್ಮಶ್ರೀ 555

## ಶ್ರೀರಾಮ ಪ್ರಾಥಮಿಕ ಶಾಲೆಯಲ್ಲೊಂದು ವಿನೂತನ ಪ್ರಯೋಗ

**ಆದಿವಾಸಿ ಕುಟುಂಬದೊಂದಿಗೆ ಸಂವಾದ ಮತ್ತು ಕರಕುಶಲ ತರಬೇತಿ 18.6.2022:**




ವಿವಿಧ ಬಳ್ಳಿ ಬಳಸಿ ಬುಟ್ಟಿ ತಯಾರಿಸುವ ಆದಿವಾಸಿ ಕೊರಗ ಸಮುದಾಯವು ಈ ವೃತ್ತಿಯಿಂದ ಹಿಂದೆ ಸರಿಯುತ್ತಿದ್ದು, ಅವರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಕೊರಗ ಸಮುದಾಯದೊಂದಿಗೆ ಸಂವಹನ ಏರ್ಪಡಿಸಲಾಯಿತು.



ಕೊರಗರ ಜೀವನ ಶೈಲಿ, ಅವರು ಎದುರಿಸುತ್ತಿರುವ ಸವಾಲು, ವೃತ್ತಿ, ಅವರ ಬದುಕು ಇದರ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ಏರ್ಪಡಿಸಲಾಯಿತು. ಸಂವಾದದಲ್ಲಿ ಬೋಳಂತೂರು ನಾರಂಕೋಡಿಯ ಮೈರೆ, ಬಲ್ಲು ಅವರು ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಬಳಿಕ ಬುಟ್ಟಿ, ಕುಡುಪು, ತೊಟ್ಟೆ, ಕುತ್ತರಿ ಹೆಣೆಯುವ ತರಬೇತಿಗಳನ್ನು ವಿದ್ಯಾರ್ಥಿಗಳಿಗೆ ನೀಡಿದರು.


ಶುಭಕೋರುವ : **ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, 574222 ದೂ: 8255275173, 8147249174
ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರ
91 ದಿನಗಳವರೆಗೆ – 5.5%
92 ರಿಂದ 181 ದಿನಗಳು – 6%
182ರಿಂದ 364 ದಿನಗಳು – 7%
1 ವರ್ಷ ಮೇಲ್ಪಟ್ಟು – 7.5%

ಸೌಲಭ್ಯಗಳು
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ, ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು



Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

KARKAN/2014/62363
Posted at Kalladka P.O. on 10th and 15th of Every month

Vol. : 9 Issue : 2 Rs. 10/-

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363